ಸರ್ಕಾರವು ಒಳನಾಡು ಮೀನುಗಾರಿಕೆಗೆ ಲಕ್ಷಾಂತರ ರೂಪಾಯಿಗಳನ್ನು ವ್ಯಯಿಸುತ್ತಿರುವುದು ಹಾಸ್ಯಾಸ್ಪದವೆಂದು ಹೇಳುವುದು ಸರಿಯಲ್ಲ ಮತ್ತು ಅತಿಶಯೋಕ್ತಿಯೆಂದು ಹೇಳಬಯಸುವೆನು. ಒಳನಾಡು ಮೀನುಗಾರಿಕೆಯು ಕೂಡ ಕರಾವಳಿಯ ಮೀನುಗಾರಿಕೆಯಷ್ಟೆ ಪ್ರಾಮುಖ್ಯತೆಯನ್ನು ಪಡೆದಿದೆ. ಒಳನಾಡು ಮೀನುಗಾರಿಕೆಗೆ ಕೂಡ ಕರಾವಳಿಯ ಮೀನುಗಾರಿಕೆಯಷ್ಟೇ ಸಹಾಯವನ್ನು ಮತ್ತು ತಕ್ಕುದಾದ ಯೋಜನೆಗಳನ್ನು ನಿರೂಪಿಸಿ ಮೀನಿನ ಉತ್ಪಾದನೆಯನ್ನು ವೃದ್ಧಿಪಡಿಸುವುದು ಅತ್ಯವಶ್ಯಕವಾಗಿದೆ. ಒಳನಾಡು ಮೀನುಗಾರಿಕೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕಾರ್ಯಚರಣೆಗೆ ತರಬೇಕಾಗಿರುವುದು. ನಮ್ಮ ರಾಜ್ಯದಲ್ಲಿ ಹಲವಾರು ಜಲಾಶಯಗಳು, ನದಿಗಳು ಕೆರೆಗಳು ಮತ್ತು ಕುಂಟೆಗಳು ಮೀನುಗಾರಿಕಾ ಅಭಿವೃದ್ಧಿಗೆ ಲಭ್ಯವಿರುವುದರಿಂದ ತಕ್ಕುದಾದ ಒಳನಾಡು ಮೀನುಗಾರಿಕಾ ಯೋಜನೆಗಳನ್ನು ರೂಪಿಸುವುದು ಸರ್ಕಾರದ ಕರ್ತವ್ಯ. ಇದೂ ಅಲ್ಲದೆ ಒಳನಾಡು ಮೀನುಗಾರರು ಕರಾವಳಿಯ ಮೀನುಗಾರರಿಗಿಂತ ತುಂಬ ಬಡತನದಲ್ಲಿರುವರೆಂದು ತಿಳಿಸಬಯಸುವೆನು.

ವೈಜ್ಞಾನಿಕ ಮತ್ಸ್ಯ ಸಂವರ್ಧನೆ ಪ್ರಾಯೋಗವನ್ನು ನಡೆಸಲು ಸರ್ಕಾರವು ಈಗಾಗಲೇ ಸೆಂಟ್ರಲ್ ಮೆರೀನ್ ರೀಸರ್ಚ್ ಇನ್‌ಸಟ್ಯೂಟ್ ಇವರೊಡನೆ ಮಾತುಕತೆಗಳನ್ನು ನಡೆಸುತ್ತಿರುವುದು. ಈ ಮಾತುಕತೆಗಳು ಫಲಪ್ರದವಾಯಕಾವಾಗಿ ಕಂಡುಬಂದಲ್ಲಿ ಪ್ರಯೋಗವನ್ನು ನಡೆಸಲು ಸರ್ಕಾರವು ಬದ್ಧವಾಗಿರುವುದೆಂದು ತಿಳಿಸಬಯಸುವೆನು.

ಹೀಗಿದ್ದರೂ ಕೂಡ ಈ ಋತುವಿನ ಉಳಿದ ತಿಂಗಳುಗಳ ಮೀನುಗಾರಿಕೆಯನ್ನು ಸಂಪೂರ್ಣವಾಗಿ ಪರಿಶೀಲಿಸಿ ಇನ್ನು ಬಾಕಿ ಉಳಿದ ತಿಂಗಳಿನ ಮೀನಿನ ಉತ್ಪಾದನೆಯನ್ನು ಪರಿಗಣಿಸಿ ಅಗತ್ಯ ಕಂಡುಬಂದಲ್ಲಿ ಮೀನುಗಾರರಿಗೆ ತಕ್ಕುದಾದ ಆರ್ಥಿಕ ನೆರವು ಕೊಡಲು ಸರ್ಕಾರವು ಪರಿಶೀಲಿಸಲಾಗುವುದೆಂದು ತಿಳಿಸಬಯಸುವೆನು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಎಲ್ಲ ವಿವರಗಳನ್ನು ಕೊಟ್ಟಿದ್ದಾರೆ. ಕೂಡಲೇ ಆ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶವನ್ನು ನೀಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೀಕರ ಮೀನಿನ ಕ್ಷಾಮ

ಶ್ರೀ ವಸಂತ ಸಾಲಿಯಾನ.—ದಕ್ಷಿಣ ಕನ್ನಡದ ಕಡಲಲ್ಲಿ ಈ ವರ್ಷ ಹಿಂದೆಂದೂ ಇಲ್ಲದಂತಹ ಭೀಕರ ಮೀನಿನ ಕ್ಷಾಮದಿಂದಾಗಿ ಮೀನುಗಾರಿಕೆಯು ತನುಬೇ ಜೀವನಾಧಾರವಾಗಿರುವ ಸಹಸ್ರಾರು ಮಂದಿ ಬಡವರು ಅತ್ಯಂತ ಕಂಗಾಲು ಸ್ಥಿತಿಯಲ್ಲಿದ್ದಾರೆ. ಬೇರೆ ಬೇರೆ ಜಾತಿ, ವರ್ಗ ಜನಾಂಗದ ಜನ ಈ ಕಸುಬಿನಲ್ಲಿ ಉದ್ಯುಕ್ತರಾಗಿದ್ದು ಆದರಲ್ಲೂ ಜೀವನದ ಹಂಗು ತೊರೆದು ಕಡಲಲ್ಲಿ ದುಡಿಯುವ ಬಡವರು, ತಲೆಯ ಮೇಲೆ ಬುಟ್ಟಿ ಹೊತ್ತು ಹತ್ತಾರು ಮೈಲಿ ನಡೆದು ಮೀನು ಮಾರಿ ಬಂದ ಸಂಪಾದನೆಯಿಂದ ಸಂಜೆಯ ಗಂಜಿ ತಿನ್ನಬೇಕಾದ ಹೆಣ್ಣು ಮಕ್ಕಳು ಇವರ ಕಡೆಗೆ ಸರಕಾರ ಕಣ್ಣು ತೆರೆಯದೆ ಲಕ್ಷಾಂತರ ರೂಪಾಯಿಗಳನ್ನು ಒಳನಾಡು ಮೀನುಗಾರಿಕೆ ವ್ಯಯಿಸುತ್ತಿರುವುದು. ನೀರಿಲ್ಲದ ಜಾಗದಲ್ಲಿ ಹೊಸ ಕೆರೆ ಕಟ್ಟಿಸಿ, ನೀರು ತುಂಬಿಸಿ, ಮೀನು ಸಾಕುವ ಪ್ರಯತ್ನ ಮಾಡುತ್ತಿರುವುದು ಅತ್ಯಂತ ಹಾಸ್ಯಾಸ್ಪದ. ನಿಸರ್ಗದತ್ತವಾದ ಸಾಗರ ತಡಿಯಲ್ಲಿ ಕಡಿಮೆ ಖರ್ಚಿನಲ್ಲಿ ಆಗಬಹುದಾದ ಮತ್ಸ್ಯವರ್ಧನೆಗೆ ಸರಕಾರ ಯಾವುದಾದರೂ ವೈಜ್ಞಾನಿಕ ಪ್ರಯೋಗ ನಡೆಸುವುದೇ ? ತಾತ್ಕಾಲಿಕವಾಗಿ ಈ ವರ್ಷ ಕರಾವಳಿಯ ಬಡ ಮೀನುಗಾರರಿಗೆ ಜೀವನ ನಿರ್ವಹಣೆಗಾಗಿ ಅಗತ್ಯವಾದ ಆರ್ಥಿಕ ನೆರವು ನೀಡುವುದೇ ಎಂದು ತಿಳಿಯಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಬಗ್ಗೆ

ಶ್ರೀ ಬಿ. ಎಸ್. ಇದಿನಬ್ಬ.—ಅಧ್ಯಕ್ಷರೇ, ದಕ್ಷಿಣ ಕನ್ನಡದ ಉಳ್ಳಾಲದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಬಹಳ ವಿಶಾಲ ಪ್ರದೇಶಗಳಿಗೆ ಒಳಪಟ್ಟಿರುತ್ತದೆ. ಸುಮಾರು ಎರಡೂವರೆ ಲಕ್ಷ ಜನರು ಇದಕ್ಕೆ ಒಳಪಡುತ್ತಾರೆ. ಇದರಿಂದಾಗಿ ಬಹಳ ದೂರ ದೂರದ ಗ್ರಾಮಾಂತರ ಮೂಲೆ ಪ್ರದೇಶಗಳಿಗೆ ಆರೋಗ್ಯ ಸೌಲಭ್ಯ ಸರಿಯಾಗಿ ದೊರಕುವುದಿಲ್ಲ; ಮುಟ್ಟುವುದಿಲ್ಲ. ಈ ದೃಷ್ಟಿಯಲ್ಲಿ

ಉಳ್ಳಾಲ ಕ್ಷೇತ್ರದ ಬೊಳಿಯಾರು ಗ್ರಾಮ ಬಹಳ ಮೂಲೆಯಲ್ಲಿದ್ದು, ಉಳ್ಳಾಲಕ್ಕೆ ಬಹಳ ದೂರದಲ್ಲಿದೆ. ಈ ಬೊಳಿಯಾರು ಗ್ರಾಮಕ್ಕೆ ಉಳ್ಳಾಲ ಆರೋಗ್ಯ ಕೇಂದ್ರದ ಘಟಕವೊಂದನ್ನು ತೆರೆಯಬೇಕೆಂದು ಜನರ ಒತ್ತಡ ಇದೆ. ಉಳ್ಳಾಲ ಆರೋಗ್ಯ ಕೇಂದ್ರದ ಸಲಹಾ ಸಮಿತಿ ಸಭೆಯಲ್ಲಿ ನಿರ್ಣಯ ಕೂಡ ಮಾಡಿ ಕಳುಹಿಸಲಾಗಿದೆ. ಬೊಳಿಯೂರಿನಲ್ಲಿ ಘಟಕ ಸ್ಥಾಪನೆ ತುಂಬಾ ಉಪಕಾರ ನೀಡುತ್ತದೆ. ಈ ಕುರಿತು ಆರೋಗ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಷಯವನ್ನು ಆರೋಗ್ಯ ಮಂತ್ರಿಗಳ ಗಮನಕ್ಕೆ ತಂದು ಉತ್ತರವನ್ನು ಕೊಡಿಸುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಮಳೆ ಬಾರದಿರುವುದರಿಂದ ಬರಗಾಲ ಕಾಮಗಾರಿಗಳನ್ನು ಪ್ರಾರಂಭಿಸುವ ಬಗ್ಗೆ

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ಇಡೀ ವಿಜಾಪುರ ಜಿಲ್ಲೆ ಸತತವಾಗಿ ನಾಲ್ಕನೆಯ ವರ್ಷವೂ ಮಳೆ ಬಾರದೆ ಅತ್ಯಂತ ಕಷ್ಟ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಈ ವರ್ಷ ಅಲ್ಲಲ್ಲಿ ಅಕ್ಟೋಬರ್ ತಿಂಗಳ ಕೊನೆಯವಾರದಲ್ಲಿ ಸ್ವಲ್ಪ ಮಳೆಯೇನೋ ಆಯಿತು. ಆದರೆ ಅದರಿಂದ ಹೇಳಿಕೊಳ್ಳುವಂಥ ಯಾವುದೇ ಪ್ರಯೋಜನವಾಗಿಲ್ಲ. ಇಡೀ ವರ್ಷ ಜನತೆ ತಮ್ಮ ಜೀವನವನ್ನು ಸಾಗಿಸುವಷ್ಟು ದವಸಧಾನ್ಯಗಳು ಬರುವುದಿಲ್ಲ. ದನಕರುಗಳಿಗೆ ಬೇಕಾದ ಮೇವಿನ ಸ್ಥಿತಿಯೂ ಚಿಂತಾಜನಕವಾಗಿದೆ. ಘಟಪ್ರಭಾ ಎಡದಂಡೆ ಕಾಲುವೆಯಿಂದ ನೀರಾವರಿಯಾಗುವ ಜಮೀನುಗಳಿಂದ ಮುಧೋಳ, ಬೀಳಗಿ ಮತ್ತು ಜಮಖಂಡಿ ತಾಲ್ಲೂಕುಗಳ ಕೆಳಭಾಗಗಳನ್ನು ಬಿಟ್ಟರೆ ಜಿಲ್ಲೆಯ ಬಹುಭಾಗದಲ್ಲಿ ಪರಿಸ್ಥಿತಿ ಅತ್ಯಂತ ಹದಗೆಟ್ಟಿದೆ. ರೈತರು ಅದರಲ್ಲಿಯೂ ಭೂಹೀನ ಕಾರ್ಮಿಕರು, ಚಿಕ್ಕ ಹಾಗೂ ಅತಿ ಚಿಕ್ಕ ರೈತರು ಮಳೆಗಾಲ ಆರಂಭದವರೆಗೆ ಜೀವನ ಸಾಗಿಸುವಲ್ಲಿ ಅತ್ಯಂತ ದುಸ್ತರವಾಗಿದೆ. ಕನಿಷ್ಟ ನಾಲ್ಕು ತಿಂಗಳುಗಳ ಕಾಲ ಎಲ್ಲಾ ಜನ ವರ್ಗವನ್ನು ಸಂರಕ್ಷಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ತಮ್ಮ ಭವಿಷ್ಯದ ಕುರಿತು ಬಡಪರು ಅತ್ಯಂತ ಚಿಂತಾಕ್ರಾಂತರಾಗಿದ್ದಾರೆ. ಜಿಲ್ಲಾಧಿಕಾರಿಗಳೇನೋ ಕೆಲವು ಹಳ್ಳಿಗಳಲ್ಲಿ ಬರಗಾಲ ಕಾಮಗಾರಿಗಳನ್ನು ಆರಂಭಿಸುವುದಾಗಿ ಹೇಳಿದ್ದು ಅದಕ್ಕಾಗಿ ಬಿಡುಗಡೆ ಆಗಿರುವ ಹಣ ಒತಕ್ಕೂ ಸಾಲದು. ಅಷ್ಟು ಅಲ್ಪಹಣದಿಂದ ಜನರನ್ನು ನಾಲ್ಕು ತಿಂಗಳು ಕಾಲ ರಕ್ಷಿಸುವುದಕ್ಕಾಗುವುದಿಲ್ಲ. ಕಾರಣ ಇಡೀ ಜಿಲ್ಲೆಯಾದ್ಯಂತ ಕೂಡಲೇ ಬರಗಾಲ ಕಾಮಗಾರಿಗಳನ್ನು ಆರಂಭಿಸಲು, ದನಕರುಗಳಿಗೆ ಮೇವು ಸರಬರಾಜು ಮಾಡಲು ಮತ್ತು ಇನ್ನೂ ಕುಡಿಯುವ ನೀರಿಗಾಗಿ ತೊಂದರೆ ಅನುಭವಿಸುತ್ತಿರುವವರ ಅನುಕೂಲಕ್ಕಾಗಿ ವಿಜಾಪುರ ಜಿಲ್ಲೆಗೆ ಈ ಕೂಡಲೇ ಬೃಹತ್ ಪ್ರಮಾಣದಲ್ಲಿ ಮೇವನ್ನು ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮೂಲಕ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವರ್ಷ ವಿಜಾಪುರ ಜಿಲ್ಲೆಯ ೪೬೧ ಹಳ್ಳಿಗಳಲ್ಲಿ ೬,೭೦,೬೨೯ ಜನರು ಅಭಾವ ಪೀಡಿತಕ್ಕೆ ಒಳಗಾಗಿದ್ದಾರೆ. ವಿಜಾಪುರ ಜಿಲ್ಲೆಗೆ ೧-೪-೧೯೮೬ ರಿಂದ ೩೦-೯-೧೯೮೬ ರವರೆಗೆ ಅಭಾವ ಪರಿಹಾರ ಕಾರ್ಯಕ್ರಮಗಳಾದ ಕುಡಿಯುವ ನೀರಿನ ಸಾಗಾಣಿಕೆ, ಗ್ರಾಮಾಂತರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕೊಳವೆಬಾವಿಗಳ ತೋಡುವಿಕೆ, ಮೇವು ಸರಬರಾಜು, ಪೌಷ್ಟಿಕ ಆಹಾರ, ಪಶುಸಂಗೋಪನೆ, ಕೃಷಿ ಮಿನಿ ಕಿಟ್ಸ್ ಉದ್ಯೋಗ ಪೂರಕ ಕಾಮಗಾರಿಗಳು ಮುಂತಾದವುಗಳಿಗೆ ೩೩೭.೫೦ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು ೩೪೪.೪೫ ಲಕ್ಷ ರೂಪಾಯಿಗಳನ್ನು ವಿಜಾಪುರ ಜಿಲ್ಲಾಧಿಕಾರಿ ಅವಶ್ಯಕತೆ ಇದ್ದ ಕಡೆ ಖರ್ಚು ಮಾಡಿದ್ದಾರೆ. ಅಕ್ಟೋಬರ್ ನಂತರ ಬಾಕಿ ಉಳಿದ ಬಿಲ್ಲುಗಳ ಪಾವತಿಗಾಗಿ ೨೮.೯೯ ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಹಾಗೂ ಹೊಸ ಕೆಲಸಗಳಿಗಾಗಿ ಹನ್ನೊಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ.

ಇದಲ್ಲದೆ ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳಿಗೆ ಅಗತ್ಯವಿರುವ ಪ್ರದೇಶಗಳಲ್ಲಿ ಯೋಜನಾ ಕಾರ್ಯಕ್ರಮಗಳಾದ ಎನ್. ಆರ್. ಇ. ಪಿ. ಡಿ. ಪಿ. ಎ. ಪಿ. ಮತ್ತು ಇತರೇ ಇಲಾಖಾ ಯೋಜನಾ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳುವಂತೆ ಹಾಗೂ ಅವಶ್ಯವಿರುವ ಪ್ರದೇಶಗಳಲ್ಲಿ ಅಭಾವ ಪರಿಹಾರ ಕಾರ್ಯಕ್ರಮಗಳನ್ನು ಪರಿಸ್ಥಿತಿ ಉತ್ತಮಗೊಳ್ಳುವವರೆಗೆ ಮುಂದುವರಿಸಿಕೊಂಡು ಬರಲು ಆದೇಶಿಸಲಾಗಿದೆ.